ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.ನೋಂ.01/2021-22 ದಿನಾಂಕ:12ನೇ ಆಗಸ್ಟ್ 2021

: : **ಸುತ್ತೋಲೆ** : :

ವಿಷಯ: 2021-22ನೇ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವಪ್ರಾಥಮಿಕ/ ಪ್ರಾಥಮಿಕ/ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:29-06-2021,:23-7-2021 ದಿನಾಂಕ27-07-2021

*****

2021-22ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ/ಪ್ರಾಥಮಿಕ ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ **ದಿ:05-07-2021 ರಿಂದ ದಿ:16-8-2021ರವರೆಗೆ ಇಲಾಖಾ ವೆಬ್‌ಸೈಟ್‌ನಲ್ಲಿ** [www.schooleducation.kar.nic.in] ಅರ್ಜಿಗಳನ್ನು ಸಲ್ಲಿಸಲು ಈ ಕಛೇರಿ ಸುತ್ತೋಲೆ ದಿನಾಂಕ:27-07-2021ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ನಂತರ ಆಡಳಿತಾತ್ಮಕ ದೃಷ್ಟಿಯಿಂದ ಹೊಸ ಶಾಲೆಗಳ ನೊಂದಣಿ ದಿನಾಂಕವನ್ನು **30-08-2021**ರವರೆಗೆ ವಿಸ್ತರಿಸಲಾಗಿದ್ದು ಈ ಕುರಿತಂತೆ ವೇಳಾಪಟ್ಟಿಯನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

ಈಗಾಗಲೇ ಆಡಳಿತ ಮಂಡಳಿಗಳು ಆನ್‌ಲೈನ್ ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಈ ಕಛೇರಿ ಸುತ್ತೋಲೆ ದಿನಾಂಕ:29-06-2021ರಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ವಯ ಪರಿಶೀಲಿಸಿ ತಮ್ಮ ಹಂತದಲ್ಲಿ ಕ್ರಮವಹಿಸಬೇಕಾದಲ್ಲಿ ಕೂಡಲೇ ಕ್ರಮವಹಿಸಿ ಮುಂದಿನ ಹಂತಕ್ಕೆ ಕ್ರಮಕೈಗೊಳ್ಳಲು ಕ್ರಮವಹಿಸುವುದು. ಯಾವುದೇ ಕಾರಣಕ್ಕೂ ಅಂತಿಮ ದಿನಾಂಕದವರೆಗೆ ಪರಿಶೀಲಿಸದೆ ವಿಳಂಬ ಮಾಡಬಾರದೆಂದು ಸೂಚಿಸಿದೆ.

ವಿಶೇಷ ಸೂಚನೆ:- ಹೊಸ ಶಾಲೆಗಳ ನೋಂದಣಿಗಾಗಿ ಆಡಳಿತ ಮಂಡಳಿಗಳಿಂದ ಭೌತಿಕವಾಗಿ ಯಾವುದೇ ದಾಖಲೆಗಳನ್ನು ಪಡೆಯುವಂತಿಲ್ಲ. ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಿರುವ ಮಾಹಿತಿ/ದಾಖಲೆಗಳ ಆಧಾರದ ಮೇಲೆ ಕ್ರಮವಹಿಸುವುದು.

## : ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ವೇಳಾಪಟ್ಟಿ :

| ಕ್ರ.ಸಂ | ವಿಷಯ | ನಿಗಧಿಪಡಿಸಿದ ಕೊನೆಯ ದಿನಾಂಕ | ಪರಿಷ್ಕೃತ ಕೊನೆಯ ದಿನಾಂಕ |
|---|---|---|---|
| 1 | ಅರ್ಹ ನೋಂದಾಯಿತ ಸಂಸ್ಥೆಗಳು ಹೊಸ ಶಾಲೆಗಳ ನೋಂದಣಿಗಾಗಿ / ಉನ್ನತೀಕರಿಸುವ ಶಾಲೆಗಳ ನೋಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ. | 16-08-2021 | 30-08-2021 |
| 2. | ಆಡಳಿತ ಮಂಡಳಿಗಳಿಂದ ಆನ್‌ಲೈನ್ ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಹೊಸ ಶಾಲೆಯ ತಂತ್ರಾಂಶದಿಂದ ಎಸ್.ಎ.ಟಿ.ಎಸ್ ತಂತ್ರಾಂಶಕ್ಕೆ ಅಫ್‌ಲೋಡ್ ಮಾಡಲು ನಿಗಧಿಪಡಿಸಿರುವ ದಿನಾಂಕ: | 18-08-2021 | 04-9-2021 |
| 3. | ಎಸ್.ಎ.ಟಿ.ಎಸ್ ತಂತ್ರಾಂಶದಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಲಾಗಿನ್‌ಗೆ ಮಾಹಿತಿಗಳನ್ನು ಅಫ್‌ಲೋಡ್ ಮಾಡಲು ನಿಗಧಿಪಡಿಸಿದ ದಿನಾಂಕ | 19-8-2021 | 06-9-2021 |

| | | | |
|---|---|---|---|
| 4. | ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ. | 26-08-2021 | 16-9-2021 |
| 5. | ಉಪನಿರ್ದೇಶಕರು ಸಂಬಂಧಿಸಿದ ಆಯುಕ್ತಾಲಯಕ್ಕೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ. | 30-08-2021 | 24-9-2021 |
| 6. | ಸಂಬಂಧಿಸಿದ ಆಯುಕ್ತಾಲಯಗಳಲ್ಲಿ / ಉಪನಿರ್ದೇಶಕರ ಕಛೇರಿಗಳಲ್ಲಿ ಹೊಸ ಶಾಲೆಗಳ ನೋಂದಣಿ / ಉನ್ನತೀಕರಿಸುವ ಶಾಲೆಗಳ ನೋಂದಣಿ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ. | 06-09-2021 | 30-9-2021 |

ಈ ಬಗ್ಗೆ ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಮುಂದಿನ ಕ್ರಮಕೈಗೊಳ್ಳಲು ಈ ಕಛೇರಿಯ ಎಸ್.ಎ.ಟಿ.ಸ್ ವಿಭಾಗವು ತಕ್ಷಣ ಕ್ರಮಕೈಗೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಿಂದ ರಾಜ್ಯ ಹಂತದವರೆಗೆ ಪರಿಶೀಲಿಸಿ ಆಗಿಂದಾಗಲೇ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಕ್ರಮಕೈಗೊಳ್ಳಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಸೂಚಿಸಿದೆ.

**"ಮಾನ್ಯ ಆಯುಕ್ತರ ಆದೇಶದ ಮೇರೆಗೆ"**

ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಇವರಿಗೆ,

1 ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ
2 ರಾಜ್ಯದ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:-**

1 ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರಿಗೆ ಕಳುಹಿಸುತ್ತಾ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.
2 ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ಕರ್ನಾಟಕ, ಬೆಂಗಳೂರು ಇವರ ಮಾಹಿತಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3 ನಿರ್ದೇಶಕರು, (ಕಾರ್ಯಕ್ರಮ) ಸಮಗ್ರ ಶಿಕ್ಷಣ, ಕರ್ನಾಟಕ, ಬೆಂಗಳೂರು ಇವರ ಮಾಹಿತಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
4 ಹಿರಿಯ ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್ ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು. ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
5 ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಕಳುಹಿಸುತ್ತಾ ಇಲಾಖಾ ವೆಬ್ ಸೈಟ್‌ನ ಸುತ್ತೋಲೆ ವಿಭಾಗದಲ್ಲಿ ಪ್ರಕಟಿಸಲು ಸೂಚಿಸಿದೆ.
6 ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು. ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
7 ಕಛೇರಿ ಪ್ರತಿ.